ಸಮಿತಿಯವರು ಖರೀದಿ ಮಾಡುವುದನ್ನು ಬಂದ್ ಮಾಡಿದ್ದಾರೆ. ರೈತರು ಅಲ್ಲಿ ಹೋರಾಟ ಮಾಡುತ್ತಿದ್ದಾರೆ. ಹಾಗಾಗಿ ಇದನ್ನು ಮುಂದುವರೆಸಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ತೋಟಗಾರಿಕೆ, ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ಮತ್ತು ಆತಂಕ ಏನೆಂದು ನನಗೆ ಅರ್ಥವಾಗುತ್ತಿದೆ. ಸರ್ಕಾರ ಇವತ್ತೇ ಅದಕ್ಕೆ ತತ್‌ಕ್ಷಣ ಕ್ರಮ ತೆಗೆದುಕೊಂಡು ಹಣ ಬಿಡುಗಡೆ ಮಾಡುತ್ತದೆ. ರಿಜಿಸ್ಟರ್ ಆಗಿರತಕ್ಕಂತಹ 900 ಜನ ರೈತರೇನಿದ್ದಾರೆ, ಅವರು ಆತಂಕ ಪಡಬೇಕಾಗಿಲ್ಲ. ಅದನ್ನು ಕೊಂಡುಕೊಳ್ಳುವ ಕೆಲಸಕ್ಕೆ ಇವತ್ತೇ ಕಾರ್ಯಕ್ರಮ ರೂಪಿಸುತ್ತೇವೆ.

(3) **ವಿಷಯ:** ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ಬಗ್ಗೆ.

ಶ್ರೀ ಎನ್. ಹೆಚ್. ಕೋನರೆಡ್ಡಿ (ನವಲಗುಂದ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡುವುದಾಗಿ ಹಿಂದಿನ ಸರ್ಕಾರ ಏನು ಘೋಷಣೆ ಮಾಡಿತ್ತು, ಈಗಿನ ಸರ್ಕಾರ ತಾಲ್ಲೂಕುಗಳ ರಚನೆ ಮಾಡುವುದರ ಬಗ್ಗೆ ಆಯವ್ಯಯದಲ್ಲಿ ಯಾವುದೇ ನಿರ್ಧಾರವನ್ನು ಘೋಷಣೆ ಮಾಡಿಲ್ಲ. ಈ ಸರ್ಕಾರ ಏನು ಮಾಡುತ್ತದೆ ಎಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ: ನಿಮ್ಮ ಪ್ರಶ್ನೆಯೇ ಬೇರೆ ಇದೆ. ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಷಯ ಇಲ್ಲಿ ಪ್ರಸ್ತಾಪವಾಗಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಾದ ಮಹಾ ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಚುನಾವಣೆ ನಡೆದು ಒಂದು ವರ್ಷವಾಯಿತು. ಸರ್ಕಾರದ ಮೀಸಲಾತಿಗಳನ್ನು ನಿಗದಿಪಡಿಸುವಲ್ಲಿ ಕೆಲವು ತೊಂದರೆಗಳಾಗಿವೆ ಎಂದು ಕೆಲವರು ಕೋರ್ಟಿಗೆ ಹೋಗಿದ್ದಾರೆ. ಇದುವರೆಗೆ

ಅದರ ಬಗ್ಗೆ ನಿರ್ಧಾರವಾಗಿಲ್ಲ. ಅವರಿಗೆ ಅಧಿಕಾರ ನಡೆಸುವುದಕ್ಕೆ ಬಿಡುತ್ತೀರೋ ಅಥವಾ ಇಲ್ಲವೋ ಸರ್ಕಾರ ಯಾವ ರೀತಿಯಾಗಿ ನಿರ್ಧಾರ ಮಾಡುತ್ತದೆ ಎನ್ನುವುದನ್ನು ಹೇಳಿ, ಇದನ್ನು ಗಂಭೀರವಾಗಿ ತೆಗೆದುಕೊಂಡು ಅವರು ಚುನಾಯಿತ ಪ್ರತಿನಿಧಿಗಳು ಅಧಿಕಾರ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಪೌರಾಡಳಿತ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ವಿಚಾರ ಈಗಾಗಲೇ ಸರ್ಕಾರಕ್ಕೆ ತಿಳಿದಿದೆ. ಕೋರ್ಟಿನಲ್ಲಿ single bench ನಲ್ಲಿ ತೀರ್ಪು ಬಂದು, ಅದರ ಮೇಲೆ ಸರ್ಕಾರವೂ ಒಂದು ಅಪೀಲು ಹಾಕುತ್ತದೆ. ಅಪೀಲು ನಾಳೆ 19ನೇ ತಾರೀಖು ಕೋರ್ಟಿನಲ್ಲಿ ವಿಚಾರಣೆಗೆ ಬರುತ್ತದೆ. ನಾಳೆ ಇತ್ಯರ್ಥವಾಗುತ್ತದೆ. ಆಗ ಇದನ್ನೆಲ್ಲವನ್ನೂ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ವಿಳಂಬವಾಗಿರುವ ಬಗ್ಗೆ ಸರ್ಕಾರವೂ ಕೂಡ ಕಾಳಜಿ ವಹಿಸಿ ಬೇಗ ಚುನಾವಣೆ ನಡೆಸಬೇಕೆಂಬ ವಿಚಾರವೂ ನಮ್ಮದಾಗಿದೆ.

(4) **ವಿಷಯ:** ಎ.ಪಿ.ಎಂ.ಸಿ. ಚುನಾವಣೆ ಸಂದರ್ಭದಲ್ಲಿ ಮಾರಣಾಂತಿಕ ಹಲ್ಲೆ ಆಗಿರುವ ಬಗ್ಗೆ.

ಶ್ರೀ ಕೆ. ಎನ್. ರಾಜಣ್ಣ (ಮಧುಗಿರಿ): ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ 16ನೇ ತಾರೀಖು inter-state gamblerಗಳು ಮರಳು ಮಾಫಿಯಾದವರು, ಮಟ್ಕಾ ಹಾಗೂ ಜೂಜಿನವರು ಎಲ್ಲಾ ಸೇರಿ AMPCS ಚುನಾವಣೆಯಲ್ಲಿ ಇಂಕ್ ಸುರಿದು ಆ ಚುನಾವಣೆಯನ್ನು ನಿಲ್ಲಿಸಿರತಕ್ಕಂಥದ್ದು ಒಂದು, ಆ ಸಂದರ್ಭದಲ್ಲಿ ನಮ್ಮ ಪಕ್ಷದ ಒಬ್ಬ ಮುಖಂಡರಿಗೆ ತಲೆಗೆ ಗಾಯಗಳಾಗಿರುವಂತಹ ಘಟನೆ ನಡೆದಿದೆ. ಈ ಘಟನೆ ಬಗ್ಗೆ ಪೊಲೀಸ್‌ನವರು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳದೆ ಇರತಕ್ಕಂಥದ್ದು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.